ಡಿಸೆಂಬರ್ ಜನವರಿ ತಿಂಗಳು ಬಂದವೆಂದರೆ ಛಾಯಾಗ್ರಹಣದ ಹವ್ಯಾಸವುಳ್ಳವರಿಗೆ ಸುಗ್ಗಿಯ ಕಾಲ. ಹೌದು, ಇದು ಸುಗ್ಗಿಯ ಕಾಲವೇ; ಹಾಗೆಯೇ ಮಾಗಿಯ ಕಾಲವೂ ಹೌದು. ಸುಗ್ಗಿಯ ಒಕ್ಕಲಾಟದ ಚಟುವಟಿಕೆಗಳು ಹಾಗೂ ಮಾಗಿಯ ಹಿಮ ಬೀಳುವ ದಿನಗಳು ಸೊಗಸಾದ ಚಿತ್ರಗಳನ್ನು ಚಿತ್ರೀಕರಿಸಲು ಸೂಕ್ತವಾದ ಕಾಲ. ಪ್ರಸ್ತುತ ಮಾಗಿಯ ಹಿಮ ಬಿದ್ದ ದಿನಗಳತ್ತ ನಮ್ಮ ಗಮನ ಹರಿಸೋಣ.

ಹಿಂದಿನ ರಾತ್ರಿಯೆಲ್ಲಾ ಹಿಮ ಬಿದ್ದು, ಚೆನ್ನಾಗಿ ಬಿಸಿಲು ಇದ್ದ ಒಂದು ಮುಂಜಾನೆ ವಾಕಿಂಗ್ ಹೋಗುತ್ತಿರುವಾಗ, ರಸ್ತೆ ಬದಿಯ ಗಿಡದಲ್ಲಿ ಜೇಡ ಬಲೆ ಕಟ್ಟಿತ್ತು. ಅದರ ಮೇಲೆ ನೀರಿನ ಹನಿಗಳು ಕುಳಿತು, ಎಳೆಬಿಸಿಲಿನಲ್ಲಿ ಗಾಜಿನ ಮಣಿಗಳಂತೆ ಹೊಳೆಯುತ್ತಿದ್ದವು. 'ಓಹ್, ಎಷ್ಟು ಚೆನ್ನಾದ ಮುತ್ತಿನ ಮಣಿಗಳು' ಎಂಬ ಉದ್ಗಾರ ಹೊರಬಿತ್ತು.

ಹಾಗೆಯೇ ಸ್ವಲ್ಪ ಮುಂದೆ ಸಾಗಿದಾಗ ಇನ್ನಷ್ಟು, ಮತ್ತಷ್ಟು ಜೇಡರ ಬಲೆಗಳು. ಒಂದೊಂದೂ ವಿಭಿನ್ನ ರೀತಿಯಲ್ಲಿದ್ದು ಗಮನ ಸೆಳೆಯುತ್ತಿದ್ದವು. ಕ್ಯಾಮೆರಾ ಸದಾ ಜತೆಯಲ್ಲಿರುವುದರಿಂದ ಛಾಯಾಚಿತ್ರಣ ಮಾಡುವ ಹಂಬಲ ತಡೆಯಲು ಸಾಧ್ಯವೇ? ಗಾಢ ಹಿನ್ನೆಲೆ ಇರಿಸಿಕೊಂಡು ಚಿತ್ರಿಸಿದಾಗ ನಿಜಕ್ಕೂ ವಿಶಿಷ್ಟ ಚಿತ್ರಗಳು ಮೂಡಿಬಂದವು.

ಚಿತ್ರ ತೆಗೆಯಲು ಸೂಕ್ತ ಕೋನದ ಆಯ್ಕೆ, ಬೆಳಕು ಕಮ್ಮಿಯಿದ್ದ ಹಿನ್ನೆಲೆ ಹುಡುಕಿ, ಕ್ಯಾಮೆರಾವನ್ನು ಮ್ಯಾಕ್ರೊಗೆ ಹೊಂದಿಸಿ ಈ ಫೋಟೋಗಳನ್ನು ಕ್ಲಿಕ್ಕಿಸಿದ್ದೇನೆ. ಗುಣಮಟ್ಟದ ಕ್ಯಾಮೆರಾ, ತಕ್ಕ ಅನುಭವ, ಸ್ವಲ್ಪ ತಾಳ್ಮೆ ಇದ್ದರೆ ಇಂತಹ ಚಿತ್ರಗಳನ್ನು ನೀವೂ ಸಂಯೋಜನೆ ಮಾಡಬಹುದು. ಬೇಕಿದ್ದರೆ ಫೋಟೋಶಾಪ್ ಉಪಯೋಗಿಸಿ ಚಿತ್ರಗಳನ್ನು ಉತ್ತಮಪಡಿಸಬಹುದು. ಅಂತಿಮವಾಗಿ ಮೂಡಿಬರುವ ಛಾಯಾಚಿತ್ರಗಳು ನೋಡುಗರಿಗೆ ಖುಷಿ ಕೊಡುವುದು ಖಂಡಿತ. ■





